# ಆಲ್ ರೌಂಡರ್ ಆದರಷ್ಟೇ ಉಳಿಗಾಲವೇ?

**ಏಕದಿನ ಕ್ರಿಕೆಟ್ ಮಾದರಿಯ ಅಪ್‌ಡೇಟೆಟ್ ಅಡಿಗೆರೆ 'ಆಲ್ ರೌಂಡರ್‌ಗಳಿಗೇ ಇದು ಕಾಲ'. ಬೌಲಿಂಗ್ ಮಾಡುವುದನ್ನು ಬಿಟ್ಟ ರಾಯುಡು ಹೊರಗೆ ಹೋದರು. ಸ್ಪಿನ್ ಬಿಟ್ಟು ಮಧ್ಯಮ ವೇಗದ ಬೌಲಿಂಗ್ ಕಲಿತ ವಿಜಯ್ ಶಂಕರ್ ಒಳಬಂದರು. ತುಡುಗು ಬುದ್ಧಿಯ ಪಂತ್‌ಗೂ ಇನ್ನೂ ಕಾಲ ಬರಲಿಲ್ಲ. ದಿನೇಶ್ ಕಾರ್ತಿಕ್ 'ಫಿನಿಷರ್' ಅಂತೆ. ರಾಹುಲ್ ಹೇಗೋ ತೂರಿಕೊಂಡುಬಿಟ್ಟರು. ವಿಶ್ವಕಪ್‌ಗೆ ಆಯ್ಕೆಯಾದ ತಂಡದ ಕುರಿತು ಹೀಗೊಂದು ವಿಶ್ಲೇಷಣೆ...**

■ **ವಿಶಾಖ ಎನ್.**




ಅಂಬಾಟಿ ರಾಯುಡು

ಸ್ವಲ್ಪ ನಾಸ್ಟಾಲ್ಜಿಕ್ ಆಗೋಣ. 1983ರ ವಿಶ್ವಕಪ್ ಇಂಗ್ಲೆಂಡ್‌ನಲ್ಲಿ ನಡೆಯಿತಲ್ಲ; ಆಗ ಮೊಹಿಂದರ್ ಅಮರ್‌ನಾಥ್ ಮೀಸೆ ಬಿಟ್ಟಿದ್ದರು. ಸಾಮಾನ್ಯವಾಗಿ ಮೀಸೆ ಇಲ್ಲದೆಯೇ ಕಾಣಿಸಿಕೊಳ್ಳುತ್ತಿದ್ದ ಅವರು ಯಾವ ದೇವರಿಗೂ ಹರಕೆ ಹೊತ್ತಿರಲಿಲ್ಲ. ವಿಶ್ವಕಪ್ ಪ್ರಾರಂಭವಾಗುವ ವಾರಗಳ ಮೊದಲು ಕೆರೀಬಿಯನ್ ಬೌಲರ್ ಮಾರ್ಷಲ್ ಎಸೆತವೊಂದು ಅವರ ಮೂತಿಗೆ ಬಡಿದಿತ್ತು. ಆಗ ಹಾಕಿಸಿದ್ದ ಹೊಲಿಗೆಯ ಮಾರ್ಕುಗಳು ಕಾಣದೇ ಇರಲಿ ಎಂದು ಅವರು ಮೀಸೆ ಬಿಟ್ಟಿದ್ದು. ರಾಬರ್ಟ್ಸ್, ಗಾರ್ನರ್, ಹೋಲ್ಡಿಂಗ್, ಮಾರ್ಷಲ್ ತರಹದ ಘಟಾನುಘಟಿ ಬೌಲರ್‌ಗಳನ್ನು ಹೊಂದಿದ್ದ ಕ್ಲೈವ್ ಲಾಯ್ಡ್, ತಮ್ಮ ವಿಂಡೀಸ್ ತಂಡವೇ ಆಗ ವಿಶ್ವಕಪ್ ಗೆಲ್ಲುವ ಫೇವರಿಟ್ ಎಂದು ಬೀಗುತ್ತಿದ್ದರು. ಆದರೆ, ಮೀಸೆ ಬಿಟ್ಟ ಅಮರ್‌ನಾಥ್ ಹಾಗೂ ಮೂಗುಜ್ಜುತ್ತಾ ಆಡುವ ಜಾಯಮಾನದ ಕ್ರಿಷ್ ಶ್ರೀಕಾಂತ್ ಕ್ರಮವಾಗಿ 26 ಹಾಗೂ 38 ರನ್ ಗಳಿಸಿದರು. ಅಮರ್‌ನಾಥ್ ಮೇಲೆ ಸೋಮಾರಿ, ಬೋರು ಎಂಬೆಲ್ಲ ಆರೋಪಗಳಿದ್ದವು. ನಗು ನಗುತ್ತಾ ತಮ್ಮನ್ನು ತಾವೇ ಗೇಲಿ ಮಾಡಿಕೊಳ್ಳುವಾಗ ಅವರು ಅಂಥ ಆರೋಪಗಳನ್ನೆಲ್ಲ 'ಗುಣವಿಶೇಷಣಗಳು' ಎಂದು ಹೇಳಿಕೊಳ್ಳುತ್ತಿದ್ದುದೂ ಉಂಟು. ಅಮರ್‌ನಾಥ್ 1983ರ ವಿಶ್ವಕಪ್ ಫೈನಲ್ಸ್‌ನಲ್ಲಿ ಗಳಿಸಿದ ತಾದಾತ್ಮ್ಯದ 26 ರನ್‌ಗಳು ತುಂಬಾ ಮುಖ್ಯವಾಗಿದ್ದವು. ಬೌಲಿಂಗ್‌ನಲ್ಲೂ ಕಾಣಲಿಲ್ಲ. 7 ಓವರ್‌ಗಳಲ್ಲಿ ಬರೀ 12 ರನ್ ನೀಡಿ 3 ವಿಕೆಟ್ ಕಿತ್ತರು. ಭಾರತ ಆ ವಿಶ್ವಕಪ್ ಗೆದ್ದಿದ್ದಂತೂ ನಮಗೆಲ್ಲ ಗೊತ್ತೇ ಇದೆ.

ಕ್ರಿಕೆಟ್ ಅಭಿಮಾನಿಗಳಿಗೆ ಯಾವತ್ತೂ ಅಮರ್‌ನಾಥ್ ತರಹದವರು ಹೆಚ್ಚು ಕಾಡುವುದಿಲ್ಲ. ಯಾಕೆಂದರೆ ಅವರು ದಾಳಿಕೋರ ಅಲ್ಲ.

ಅಮರ್‌ನಾಥ್ ಆಟ ನೆನಪಾಗಲಿಕ್ಕೆ ವಿಜಯ್ ಶಂಕರ್ ಕಾರಣ. ತಮಿಳುನಾಡಿನ ಈ ಹುಡುಗ ವಿಶ್ವಕಪ್ ಆಡುವ ತಂಡಕ್ಕೆ ಆಯ್ಕೆಯಾಗಿದ್ದಾರೆ. 2014–15ರ ರಣಜಿಯಲ್ಲೇ ವಿಜಯ್ ಶಂಕರ್ ಆಟದ ಖದರನ್ನು ನಾವು ಕಂಡಿದ್ದೆವು. 111, 82, 91, 103 ಹೀಗೆ ಆ ರಣಜಿ ಋತುವಲ್ಲಿ ಅವರು ರನ್ ಕಲೆಹಾಕಿದ್ದರು. 57.70 ಸರಾಸರಿಯಲ್ಲಿ 577 ರನ್‌ಗಳನ್ನು ತಮಿಳುನಾಡಿಗೆ ಕೊಟ್ಟಿದ್ದರು. ಇಡೀ ತಮಿಳುನಾಡು ತಂಡ ಪುನರುತ್ಥಾನ ಬಯಸಿದ್ದ ಸಂದರ್ಭವದು.

ಆಸ್ಟ್ರೇಲಿಯಾ ಎದುರು ಈಚೆಗಷ್ಟೇ ವಿಜಯ್ ಶಂಕರ್ ಆಲ್‌ರೌಂಡರ್ ಆಗಿ ಚೆನ್ನಾಗಿ ಆಡುತ್ತಿದ್ದಾಗ ಇನ್ನೊಂದು ಸೂಕ್ಷ್ಮ ಗೊತ್ತಾಯಿತು. ಅವರು 'ಇಂಡಿಯಾ ಎ' ತಂಡ ಪ್ರತಿನಿಧಿಸುವ ಅವಕಾಶ ಒಲಿದುಬಂದಾಗ, ಮೊದಲು ಆಡಿದ್ದು ಆಸ್ಟ್ರೇಲಿಯಾ 'ಎ' ಎದುರಿನಲ್ಲೇ. ಚೊಚ್ಚಲ ಪಂದ್ಯದಲ್ಲೇ ಔಟಾಗದೆ ಅರ್ಧಶತಕ ಗಳಿಸಿದ್ದು ಆ ತಂಡವನ್ನು ಸೋಲಿಸಬೇಕೆಂಬ ಅವರೊಳಗಿನ ಉತ್ಕಟತೆಗೆ ಸಾಕ್ಷಿ. ಗುರಿಂದರ್ ಸಂಧು, ಆಂಡ್ರೂ ಫೆಕೆಟ್, ಸೀನ್ ಅಬಾಟ್, ಸ್ಟೀವ್ ಒಕೆಫೆ ತರಹದ ಘಟಾನುಘಟಿಗಳಿದ್ದ ಬೌಲಿಂಗ್ ದಾಳಿಯನ್ನು ಎದುರಿಸಿ ಅಷ್ಟು ರನ್‌ಗಳನ್ನು ಅವರು ಗಳಿಸಿದ್ದರೆನ್ನುವುದಕ್ಕೆ ಅಡಿಗೆರೆ ಎಳೆಯಬೇಕು.

ಇಪ್ಪತ್ತನೇ ವಯಸ್ಸಿನಲ್ಲಿ ಆಫ್ ಸ್ಪಿನ್ ಬೌಲ್ ಮಾಡುತ್ತಿದ್ದ ಶಂಕರ್, ತಮಿಳುನಾಡಿನಲ್ಲಿ ಎಲ್ಲಿ ನೋಡಿದರೂ ಸ್ಪಿನ್ನರ್‌ಗಳೇ ಕಾಣುತ್ತಿದ್ದುದನ್ನು ನೋಡಿ ಹೊಸತೇನನ್ನಾದರೂ ಮಾಡಬೇಕು ಎಂದು ಬಯಸಿದರು. ಹೀಗಾಗಿಯೇ ಮಧ್ಯಮ ವೇಗದ ಬೌಲಿಂಗ್ ಶೈಲಿಗೆ ಹೊರಳಿಕೊಂಡಿದ್ದು. ಅದೇ ಈಗ ಅವರಿಗೆ ವರದಾನವಾಗಿದೆ. ಇನ್ನೊಂದು ಕಡೆ ಅಂಬಟಿ ರಾಯುಡುಗೆ ಮುಳುವಾಗಿದೆ.